OS 56.2010

PW-1

ದಿನಾಂಕ 29.11.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. J.M. ವಕೀಲರಿಂದ:</u>**

ನೀವು ವಾದ ಪತ್ರದಲ್ಲಿ ದಾವೆ ಚಾಲ್ತಿಯಲ್ಲಿರುವಾಗ ತಿದ್ದುಪಡಿ ಮಾಡಿರುತ್ತೀರಿ, ಏನನ್ನು ತಿದ್ದುಪಡಿ ಮಾಡಿದ್ದೀರಿ ಎಂದು ಹೇಳಲು ಆಗುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಯ ಹೆಸರು ನಿಂಗಮ್ಮ ಉ. ಪುಟ್ಟತಾಯಮ್ಮ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತು. ನಿಮ್ಮ ತಾಯಿಯವರು ಎಷ್ಟು ವರ್ಷಗಳ ಹಿಂದೆ ಸದರಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಎಷ್ಟು ವರ್ಷ ಎಂದು ನೆನಪಿಲ್ಲ ಎಂದು ನುಡಿಯುತ್ತಾರೆ.

ನಿಮ್ಮ ತಾಯಿಯ ಸ್ವಯಾರ್ಜಿತ ಸ್ವತ್ತಾಗಿರುವ ಕಾರಣ ಅದರಲ್ಲಿ ನೀವು ಭಾಗ ಕೇಳಲು ಬರುವುದಿಲ್ಲ ಎಂಬ ಹೇಳಿಕೆಗೆ ಸಾಕ್ಷಿದಾರರು ನಮ್ಮ ತಾಯಿ , ನಾನು ಮತ್ತು ನನ್ನ ತಮ್ಮ , ಅಣ್ಣ ಸೇರಿ ಖರೀದಿ ಮಾಡಿದ ಸ್ವತ್ತು ಎಂದು ನುಡಿಯುತ್ತಾರೆ. ನೀವು ಕೊಂಡುಕೊಂಡಿರುವ ಸ್ವತ್ತು ನಿಂಗಮ್ಮ ಉ. ಪುಟ್ಟತಾಯಮ್ಮ ರವರ ಹೆಸರಿನಲ್ಲಿ ಮಾತ್ರ ಇದೆ , ಒಟ್ಟು ಕುಟುಂಬದಲ್ಲಿ ಖರೀದಿ ಮಾಡಿದ್ದಾರೆ ಎಂದು ಒಕ್ಕಣೆ ಕ್ರಯ ಪತ್ರದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ನಿಂಗಮ್ಮ ಉ. ಪುಟ್ಟತಾಯಮ್ಮ ರವರು ಸ್ವಯಾರ್ಜಿತ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ.

OS 56.2010

PW-1

ನಿಮ್ಮ ತಾಯಿಯ ಹೆಸರಿನಲ್ಲಿ ಎಷ್ಟು ಎಕರೆ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿದಾರರು 4 ಎಕರೆ 17 ಗುಂಟೆ ಸರ್ವೆ ನಂ. 11 ಎಂದು ನುಡಿಯುತ್ತಾರೆ. ನಿಂಗಮ್ಮ ಉ. ಪುಟ್ಟತಾಯಮ್ಮ ರವರ ನಂತರ ದಾವಾ ಸ್ವತ್ತನ್ನು ಯಾರ ಹೆಸರಿಗೆ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ತಾಯಿ ಯನ್ನು ಅನಿಲ್ ಕುಮಾರ್ ರವರು ಕರೆದುಕೊಂಡು ಹೋಗಿ ತನ್ನ ಹೆಸರಿಗೆ ದಾವಾ ಸ್ವತ್ತನ್ನು ಬರೆಸಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ಅನಿಲ್ ಕುಮಾರ್ ನನ್ನ ತಾಯಿಗೆ ಮೊಮ್ಮಗ ಆಗಬೇಕು.

ನಿಂಗಮ್ಮ ಉ. ಪುಟ್ಟತಾಯಮ್ಮ ರವರು ತಮ್ಮ ಮೊಮ್ಮಗನಿಗೆ ಸ್ವಯಾರ್ಜಿತ ಆಸ್ತಿಯನ್ನು ದಿನಾಂಕ 29.08.2005 ರಲ್ಲಿ ದಾನ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ಆ ಬಗ್ಗೆ ನನ್ನ ತಾಯಿಗೆ ಗೊತ್ತಿರಲಿಲ್ಲ , ಸಾಲ ಕೊಡಿಸುವುದಾಗಿ ಹೇಳಿ ದಾನ ಪತ್ರ ಮಾಡಿಸಿಕೊಂಡಿರುವುದಾಗಿ ನುಡಿಯುತ್ತಾರೆ. ನಿಮ್ಮ ತಾಯಿಯ ಹೆಸರಿನಲ್ಲಿರುವಾಗ ಭಾಗ ಕೇಳಿರುವುದಿಲ್ಲ , ಅನಿಲ್ ಕುಮಾರ್ ಹೆಸರಿಗೆ ದಾನ ಆದಾಗಲೂ ಭಾಗ ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

ಅನಿಲ್ ಕುಮಾರ್ ರವರು 5 ನೇ ಪ್ರತಿವಾದಿ ಮುನಾವರ್ ಬೇಗಂ ರವರಿಗೆ ಕ್ರಯ ಪತ್ರ ಮಾಡಿಕೊಟ್ಟ ಮೇಲೆ , ಆಗ ನೀವು ಭಾಗ ಬರಬೇಕೆಂದು ದಾವೆ ಹಾಕಿರುತ್ತೀರಿ ಎಂದರೆ ಸರಿ . ನಿಮ್ಮ ತಾಯಿಯ ಹೆಸರಿನಲ್ಲಿರುವಾಗ ಭಾಗ ಕೇಳಿರುವುದಿಲ್ಲ , ಅನಿಲ್ ಕುಮಾರ್ ಹೆಸರಿಗೆ ದಾನ ಆದಾಗಲೂ ಭಾಗ ಕೇಳಿರುವುದಿಲ್ಲ . 5 ನೇ ಪ್ರತಿವಾದಿ ಮುನಾವರ್ ಬೇಗಂ ರವರಿಗೆ ಕ್ರಯ ಆದ ಮೇಲೆ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಹಾಕಿರುತ್ತೀರಿ ಎಂದರೆ ಸಾಕ್ಷಿದಾರರು ಸರಿಯಲ್ಲ . ಆ ಸಮಯದಲ್ಲಿ ನಮಗೆ ಮೋಸ ಮಾಡಿ

ಅನಿಲ್ ಕುಮಾರ್ ದಾನ ಪಡೆದಿರುವ ವಿಷಯ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ಈಗ 5 ನೇ ಪ್ರತಿವಾದಿಯಿಂದ 6 ನೇ ಪ್ರತಿವಾದಿ ದಾವಾ ಸ್ವತ್ತು ವರ್ಗಾವಣೆ ಆಗಿರುತ್ತದೆ ಎಂದರೆ ಸರಿ . 5 ನೇ ಪ್ರತಿವಾದಿ ಮುನಾವರ್ ಬೇಗಂ ರವರು, 6 ನೇ ಪ್ರತಿವಾದಿ ಉಷಾ ಎಸ್. ಮೂರ್ತಿ ರವರಿಗೆ ದಿನಾಂಕ 12.09.2012 ರಂದು ಕ್ರಯ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ . 6 ನೇ ಪ್ರತಿವಾದಿ ಉಷಾ ಎಸ್. ಮೂರ್ತಿ ರವರು ಕ್ರಯಕ್ಕೆ ತೆಗೆದುಕೊಂಡು ಸದರಿ ಸ್ವತ್ತಿನಲ್ಲಿ ಸ್ವಾ ಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ನಾನು ಸ್ವಾ ಧೀನಾನುಭವದಲ್ಲಿ ಇದ್ದೇನೆ ಎಂದು ನುಡಿಯುತ್ತಾರೆ.

ನೀವು ಸ್ವಾ ಧೀನಾನುಭವದಲ್ಲಿ ಇರುವ ಸಂಬಂಧ ಕಂದಾಯ ಕಟ್ಟಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ನೀವು ಯಾವುದೇ ಕಂದಾಯ ಕಟ್ಟಿರುವುದಿಲ್ಲ, ಅ ಕಾರಣದಿಂದ ಯಾವುದೇ ದಾಖಲೆ ನೀಡಿರುವುದಿಲ್ಲ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

6 ನೇ ಪ್ರತಿವಾದಿ ಉಷಾ ಎಸ್. ಮೂರ್ತಿ ರವರು ಮನೆ ಕಟ್ಟಿಕೊಂಡು ಸ್ವಾ ಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಣೆ ಮುಗಿದ ನಂತರ ಅವಶ್ಯಕತೆ ಇಲ್ಲದ ತಿದ್ದುಪಡಿ ಮಾಡಿ ಸುಳ್ಳು ಪ್ರಮಾಣ ಪತ್ರವನ್ನು ಹಾಕಿದ್ದೀರಿ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಉಷಾ ಎಸ್. ಮೂರ್ತಿ ರವರು ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ಸ್ವಾ ಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕ್ರಯಕ್ಕೆ ಕೊಂಡು ಕೊಂಡ ನಂತರ 6 ನೇ ಪ್ರತಿವಾದಿ ಮನೆ ಕಟ್ಟಿಕೊಂಡಿರುವುದರ ಸಂಬಂಧ ಕಂದಾಯ ರಶೀದಿ, ವಾಸ ಸ್ಥಳ

ದೃಢೀಕರಣ ಪತ್ರ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನೀವು ಸ್ವಾಧೀನಾನುಭವದಲ್ಲಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನೀವು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ 5 ನೇ ಪ್ರತಿವಾದಿ ಯಿಂದ 6 ನೇ ಪ್ರತಿವಾದಿ ಕ್ರಯಕ್ಕೆ ತೆಗೆದುಕೊಂಡಿರುವುದು ಊರ್ಜಿತವಲ್ಲ ಎಂದು ಬರೆಸಿರುತ್ತೀರಿ , ಅದು ಸುಳ್ಳು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಭಾಗ ಕೋರಲು ನಿಮಗೆ ಯಾವುದೇ ಹಕ್ಕು ಇರುವುದಿಲ್ಲ , ನಿಂಗಮ್ಮ ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ

OS 56.2010

PW-1